# ಇವರಿಗೆ: ಆಯೋಜಕ ಕಂಪನಿಗಳು ಮತ್ತು ಶಿಕ್ಷಾರ್ಥಿಗಳು

ಶಿಕ್ಷಾರ್ಥಿಯು ಚಿಕಿತ್ಸೆಗಾಗಿ ವೈದ್ಯಕೀಯ ಸಂಸ್ಥೆಗೆ ಭೇಟಿ ನೀಡಬೇಕಾದಾಗ, ಅವನು/ಅವಳು "ವೈದ್ಯಕೀಯ ಕಾರ್ಡ್", "ವೈದ್ಯಕೀಯ ಶಿಕ್ಷಾರ್ಥಿಗೆ ವೈದ್ಯಕೀಯ ಶುಲ್ಕಗಳ ವಿವರಣೆ ಪಟ್ಟಿ" ( ಉಂಟಾದ ವೈದ್ಯಕೀಯ ಶುಲ್ಕದೊಂದಿಗೆ AOTSಗೆ ಕ್ಲೇಮ್‌ಗಾಗಿ ವೈದ್ಯಕೀಯ ಸಂಸ್ಥೆಗಳು ಉಪಯೋಗಿಸುವ ಫಾರ್ಮ್) ಮತ್ತು "AOTS ಶಿಕ್ಷಾರ್ಥಿಗಳಿಗೆ ವೈದ್ಯಕೀಯ ಕಾಳಜಿ ಬಗ್ಗೆ ಮಾರ್ಗದರ್ಶನಗಳು" (ವೈದ್ಯಕೀಯ ಕಾರ್ಡ್‌ಗೆ ಲಗತ್ತಿಸಿದೆ) ಇವುಗಳನ್ನು ಕೊಂಡೊಯ್ಯಬೇಕಾಗುತ್ತದೆ.(ಶಿಕ್ಷಾರ್ಥಿಯು ಹೆಚ್ಚುವರಿ ವೈದ್ಯಸೂಚಿಗಾಗಿ ಕಾರ್ಡ್ ಮತ್ತು ವಿವರಣೆ ಪಟ್ಟಿಯನ್ನೂ(ಸ್ಟೇಟ್‌ಮೆಂಟ್) ಫಾರ್ಮಸಿಗೆ ಕೊಂಡೊಯ್ಯಬೇಕಾಗುತ್ತದೆ)ಆಯೋಜಕ ಕಂಪನಿಯ ಪ್ರತಿನಿಧಿಯು ಚಿಕಿತ್ಸೆಯಲ್ಲಿ ಶಿಕ್ಷಾರ್ಥಿಯ ಜೊತೆಯಲ್ಲಿರಬೇಕು.

## ವೈದ್ಯಕೀಯ ಸಂಸ್ಥೆಯ ಸ್ವಾಗತಕಚೇರಿಯಲ್ಲಿ





ನಿಮ್ಮ ವೈದ್ಯಕೀಯ ಕಾರ್ಡ್ ಮತ್ತು "AOTS ಶಿಕ್ಷಾರ್ಥಿಗಳಿಗೆ ವೈದ್ಯಕೀಯ ಕಾಳಜಿಯ ಮಾರ್ಗದರ್ಶನ" ಇದನ್ನು ಸ್ವಾಗತಕಾರಿಣಿಗೆ ತೋರಿಸಿ.

(ಸೂಚನೆ) ವೈದ್ಯಕೀಯ ವೆಚ್ಚಗಳೆಂದರೆ ತರಬೇತಿ ಅವಧಿಯ ವೇಳೆ ಆಕಸ್ಮಿಕ ಅಪಘಾತದ ನಂತರ ಯಾವುದೇ ಅನಾರೋಗ್ಯ ಅಥವಾ ದೈಹಿಕ ಗಾಯಕ್ಕೆ ಸಂಬಂಧಿಸಿ ಅಗತ್ಯವಾಗಿ ಉಂಟಾದ ವೈದ್ಯಕೀಯ ವೆಚ್ಚವಾಗಿದೆ. ಆಕಸ್ಮಿಕ ಗಾಯದ ನಂತರ ಸರಾಸರಿಯಾಗಿ ಗರಿಷ್ಠ 180 ದಿನಗಳಲ್ಲಿನ ಮೊದಲ ಸಮಾಲೋಚನೆ ಅಥವಾ ವೈದ್ಯಕೀಯ ವೆಚ್ಚಕ್ಕೆ ವಿಮಾ ರಕ್ಷಣೆಯಿರುತ್ತದೆ..

" ವೈಯಕ್ತಿಕ ಶಿಕ್ಷಾರ್ಥಿಗೆ ವೈದ್ಯಕೀಯ ವೆಚ್ಚಗಳ ವಿವರಣೆ ಪಟ್ಟಿ" ಯಲ್ಲಿ ಎಲ್ಲಾ ಅಗತ್ಯ ಅಂಶಗಳನ್ನು ಅಂದರೆ ಶಿಕ್ಷಾರ್ಥಿಯ ಹೆಸರು, ರೋಗಲಕ್ಷಣಗಳು, ಶಿಕ್ಷಾರ್ಥಿಯ ಆಸ್ಪತ್ರೆ ಭೇಟಿಯನ್ನು ಅನುಮತಿಸುವ ಆಯೋಜಕ ಕಂಪನಿಯಲ್ಲಿನ ವ್ಯಕ್ತಿಯ ಹೆಸರು, ಇವುಗಳನ್ನು ತುಂಬಿರಿ ಮತ್ತು ಅದನ್ನು ಸ್ವಾಗತಕಾರಿಣಿಗೆ ಸಲ್ಲಿಸಿರಿ.

ನಿಮ್ಮ ವೈದ್ಯಕೀಯ ಕಾರ್ಡ್‌ನ ವಿವರಗಳನ್ನು ತುಂಬಿರಿ.

ರೋಗಲಕ್ಷಣಗಳು ಮತ್ತು ಅಕ್ರಮಣದ ದಿನಾಂಕ ಸೇರಿದಂತೆ , ಎಲ್ಲಾ ಅಗತ್ಯ ಅಂಶಗಳನ್ನು ತುಂಬಿರಿ.
ಆಯೋಜಕ ಕಂಪನಿಯಲ್ಲಿ ಶಿಕ್ಷಾರ್ಥಿಗೆ ಜೊತೆಯಾಗುವ ವ್ಯಕ್ತಿ, ಅಥವಾ ಶಿಕ್ಷಾರ್ಥಿಯ ಜವಾಬ್ದಾರಿ ಹೊತ್ತ ವ್ಯಕ್ತಿಯ ಹೆಸರನ್ನು ಆಯೋಜಕ ಕಂಪನಿಯಲ್ಲಿ ಶಿಕ್ಷಾರ್ಥಿಯ ಆಸ್ಪತ್ರೆ ಭೇಟಿಯನ್ನು ಅನುಮತಿಸುವ ವ್ಯಕ್ತಿಯು ತುಂಬಬೇಕು.

## ವೈದ್ಯಕೀಯ ಶುಲ್ಕಗಳ ಪಾವತಿ

1) <u>ಶಿಕ್ಷಾರ್ಥಿಯಿಂದ ಅಥವಾ ಇತರರಿಂದ ವೈದ್ಯಕೀಯ ಶುಲ್ಕಗಳನ್ನು ವೈದ್ಯಕೀಯ ಸಂಸ್ಥೆಗೆ ನೇರವಾಗಿ ಪಾವತಿಸದೇ ಇದ್ದಾಗ</u>
ವೈದ್ಯಕೀಯ ಸಂಸ್ಥೆಯ ವಿನಾಯತಿ ಸೌಜನ್ಯದ ಮೂಲಕ, ಉಂಟಾದ ವೈದ್ಯಕೀಯ ಶುಲ್ಕವನ್ನು ರೋಗಿಯಿಂದ ಕ್ಲೇಮ್ ಮಾಡಲಾಗುವುದಿಲ್ಲ. ವೈದ್ಯಕೀಯ ವೆಚ್ಚಗಳನ್ನು ಕ್ಲೇಮ್ ಮಾಡಲು AOTSಗೆ "ವೈಯಕ್ತಿಕ ಶಿಕ್ಷಾರ್ಥಿಗೆ ವೈದ್ಯಕೀಯ ವೆಚ್ಚಗಳ ವಿವರಣೆ ಪಟ್ಟಿ" ಯನ್ನು ಸಲ್ಲಿಸಿದ ಬಳಿಕ, ಬಾಕಿ ಮೊತ್ತದ ಪಾವತಿಯನ್ನು ವಿಮಾ ಕಂಪನಿಯ ಮೂಲಕ ವೈದ್ಯಕೀಯ ಸಂಸ್ಥೆಗೆ ಆನಂತರ ಪಾವತಿಸಲಾಗುತ್ತದೆ.
ಹೀಗಾಗಿ , ತತ್ವಶಃ, ಸ್ವಾಗತ ಕಚೇರಿಯಲ್ಲಿ ಯಾವುದೇ ಪಾವತಿಯ ಅಗತ್ಯವಿರುವುದಿಲ್ಲ.

2) <u>ಶಿಕ್ಷಾರ್ಥಿಗಳು ಅಥವಾ ಆಯೋಜಕ ಕಂಪನಿಯು ವೈದ್ಯಕೀಯ ವೆಚ್ಚವನ್ನು ವೈದ್ಯಕೀಯ ಸಂಸ್ಥೆಗೆ ಪಾವತಿಸಿದಾಗ</u>
ಕೆಲವು ಸಂದರ್ಭಗಳಲ್ಲಿ ಸ್ವಾಗತ ಕಚೇರಿಯಲ್ಲಿ ಪಾವತಿಯ ಅಗತ್ಯವಿರಬಹುದು. ಅಂತಹ ಸಮಯದಲ್ಲಿ, ದಯವಿಟ್ಟು ಹಣ ಪಾವತಿಸಿ.
ಇಂತಹ ಸಂದರ್ಭದಲ್ಲಿ, "ವೈಯಕ್ತಿಕ ಶಿಕ್ಷಾರ್ಥಿಗೆ ವೈದ್ಯಕೀಯ ವೆಚ್ಚಗಳ ವಿವರಣ ಪಟ್ಟಿ" ಯನ್ನು AOTS ಗೆ ಆಯೋಜಕ ಕಂಪನಿಯಿಂದ ಕಳುಹಿಸಬೇಕಾಗುತ್ತದೆ, ಮತ್ತು ಆಯೋಜಕ ಕಂಪನಿಗೆ ನಂತರ ವಿಮಾ ಕಂಪನಿಯಿಂದ ಹಣವನ್ನು ಹಿಂದಿರುಗಿಸಲಾಗುತ್ತದೆ.

< ವೈದ್ಯಕೀಯ ಶುಲ್ಕಗಳನ್ನು ಕ್ಲೇಮ್ ಮಾಡುವುದು ಹೇಗೆ >

①ಮೊದಲ ವೈದ್ಯಕೀಯ ಸಮಾಲೋಚನೆಯ ದಿನಾಂಕವನ್ನು ಬರೆಯಿರಿ( ದೈಹಿಕ ಗಾಯದ ಸಂದರ್ಭದಲ್ಲಿ ಆಕಸ್ಮಿಕ ಗಾಯ ಉಂಟಾದ ದಿನಾಂಕ) ಮತ್ತು ವಿವರಣೆ ಪಟ್ಟಿಯಲ್ಲಿನ ವಿಭಾಗದ ಬದಿಯಲ್ಲಿರುವ ಪಾರ್ಶ್ವದಲ್ಲಿರುವ ವ್ಯಾಧಿನಿರ್ಣಯವನ್ನು ಶಿಕ್ಷಾರ್ಥಿಯ ಆಸ್ಪತ್ರೆ ಭೇಟಿಯನ್ನು ಅನುಮತಿಸುವ ಆಯೋಜಕ ಕಂಪನಿಯ ವ್ಯಕ್ತಿಯು ತುಂಬಬೇಕು.
②ವಿವರಣೆ ಪಟ್ಟಿಯಲ್ಲಿ . ಹಕ್ಕುಸಾಧಕರಾಗಿ ಆಯೋಜಕ ಕಂಪನಿಯ ಹೆಸರನ್ನು ಬರೆಯಬೇಕು ಮತ್ತು ಪಾವತಿ ವರ್ಗಾವಣೆ ವಿಭಾಗದಲ್ಲಿ ಆಯೋಜಕ ಕಂಪನಿಯ ಖಾತೆ ವಿವರಗಳನ್ನು ತುಂಬಬೇಕು.
③ವಿವರಣೆ ಪಟ್ಟಿಗೆ ಮೂಲ ರಸೀದಿಯನ್ನು ಲಗತ್ತಿಸಬೇಕು ಮತ್ತು ಅದನ್ನು AOTSಗೆ ಕಳುಹಿಸಬೇಕು.
④ನಂತರ ಮುಂದಿನ ತಿಂಗಳ ಕೊನೆಯಲ್ಲಿ ಗೊತ್ತುಪಡಿಸಿದ ಖಾತೆಗೆ ವಿಮಾ ಕಂಪನಿಯಿಂದ ಬ್ಯಾಂಕ್ ವರ್ಗಾವಣೆಯ ಮೂಲಕ ಹಣ ಪಾವತಿಸಲಾಗುತ್ತದೆ.

## ಫಾರ್ಮಸಿಯಲ್ಲಿ ಬಿಲ್ ಸಂದಾಯ

ಔಷಧವನ್ನು ಪಡೆಯಲು ಔಷಧಸೂಚಿಯನ್ನು ಫಾರ್ಮಸಿಗೆ ತೆಗೆದುಕೊಂಡು ಹೋಗುವಾಗ, ಅದರೊಂದಿಗೆ, "ವೈಯಕ್ತಿಕ ಶಿಕ್ಷಾರ್ಥಿಗೆ ವೈದ್ಯಕೀಯ ವೆಚ್ಚಗಳ ವಿವರಣೆ ಪಟ್ಟಿ", "ವೈದ್ಯಕೀಯ ಕಾರ್ಡ್" ಮತ್ತು "AOTS ಶಿಕ್ಷಾರ್ಥಿಗಳಿಗೆ ವೈದ್ಯಕೀಯ ಕಾಳಜಿ ಸಲಹೆ" ಇವುಗಳನ್ನು ಸ್ವಾಗತ ಕಚೇರಿಗೆ ತೋರಿಸಬೇಕು.
ಪಾವತಿ ವಿಧಾನವು ಅದೇ ಆಗಿದೆ. ಆದರೂ, ಆಯೋಜಕ ಕಂಪನಿಯು ಫಾರ್ಮಸಿ ವೆಚ್ಚವನ್ನು ಪಾವತಿಸಿದರೆ, <u>ಭೇಟಿ ಮಾಡಿದ ವೈದ್ಯಕೀಯ ಸಂಸ್ಥೆಯ ಹೆಸರು</u> ತುಂಬಿರುವುದನ್ನು ಖಚಿತಪಡಿಸಬೇಕು, ಜೊತೆಗೆ ಮೊದಲ ವೈದ್ಯಕೀಯ ಭೇಟಿ ಮತ್ತು ರೋಗನಿರ್ಣಯದ ದಿನಾಂಕ, ಇವುಗಳನ್ನು "ವೈಯಕ್ತಿಕ ಶಿಕ್ಷಾರ್ಥಿಗೆ ವೈದ್ಯಕೀಯ ವೆಚ್ಚಗಳ ವಿವರಣೆ ಪಟ್ಟಿ" ಯ ವಿಭಾಗದ ಬದಿಯಲ್ಲಿರುವ ಪಾರ್ಶ್ವದಲ್ಲಿ ಶಿಕ್ಷಾರ್ಥಿಯ ಆಸ್ಪತ್ರೆ ಭೇಟಿಯನ್ನು ಅನುಮತಿಸುವ ಆಯೋಜಕ ಕಂಪನಿಯ ವ್ಯಕ್ತಿಯು ಬರೆಯಬೇಕು.

## ಹೆಚ್ಚಿನ ವಿಚಾರಣೆಗಳಿಗಾಗಿ, ದಯವಿಟ್ಟು ಸಂಪರ್ಕಿಸಿ

The Association for Overseas Technical Cooperation and Sustainable Partnerships (AOTS)
Corporate Liaison Group I , Corporate Liaison Department
30-1, Senju-Azuma 1-chome, Adachi-ku, Tokyo 120-8534, Japan TEL: +81-3-3888-8220 FAX: +81-3-3888-8428
URL : www.aots.jp